■ ವಿಶಾಖ ಎನ್.



# ರಿಷಬ್‌ಗೆ ಹೃತಿಕ್ ಶಹಬ್ಬಾಸ್‌ಗಿರಿ

‘ಕಾಂತಾರ’ ಕನ್ನಡ ಸಿನಿಮಾ ಹಿಂದಿ ಚಿತ್ರರಂಗದವರನ್ನು ಮೋಡಿ ಮಾಡುವ ಪ್ರಕ್ರಿಯೆ ಈಗಲೂ ಮುಂದುವರಿದಿದೆ. ಅಮೆಜಾನ್ ಪ್ರೈಮ್ ಹಾಗೂ ನೆಟ್‌ಫ್ಲಿಕ್ಸ್ ಒಟಿಟಿ ವೇದಿಕೆಗಳಲ್ಲಿ ಸಿನಿಮಾ ಬಿಡುಗಡೆಯಾದ ಮೇಲೆ ಮತ್ತಷ್ಟು ಜನರು ಅದನ್ನು ನೋಡಿ, ಕೊಂಡಾಡುವುದು ಮುಂದುವರಿದಿದೆ. ಮೊದಲಿಗೆ ಒಟಿಟಿಯಲ್ಲಿ ಕನ್ನಡದ ಮೂಲ ಸಿನಿಮಾ ಮಾತ್ರ ಬಿಡುಗಡೆಯಾಗಿತ್ತು. ಆಮೇಲೆ ಹಿಂದಿ, ಮಲಯಾಳಂ ಭಾಷೆಗಳಿಗೆ ಡಬ್ ಆದ ಆವೃತ್ತಿಗಳು ತೆರೆಕಂಡವು.



ಹಿಂದಿ ಭಾಷೆಗೆ ಡಬ್ ಆದ ಆವೃತ್ತಿಯಲ್ಲಿ ‘ಕಾಂತಾರ’ವನ್ನು ನೋಡಿದ ಹೃತಿಕ್ ರೋಷನ್, ಆ ಸಿನಿಮಾ ಕೊಂಡಾಡಿ ಟ್ವೀಟ್ ಮಾಡಿದರು. ಅದರಲ್ಲೂ ಕ್ಲೈಮ್ಯಾಕ್ಸ್ ನೋಡಿ ತಮಗೆ ರೋಮಾಂಚನವಾಯಿತು ಎಂದು ಹೊಗಳಿದ್ದಾರೆ. ರಿಷಬ್ ಶೆಟ್ಟಿ ಅವರ ಅಭಿನಯ ಹಾಗೂ ಚಿತ್ರಕಥಾ ಕೌಶಲವನ್ನು ಅವರು ಟ್ವೀಟ್‌ನಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಾರೆ.

ಅವರ ಟ್ವೀಟ್‌ಗೆ ಕಾಮೆಂಟ್ ಮಾಡಿದವರಲ್ಲಿ ದಕ್ಷಿಣ ಭಾರತದ ಒಬ್ಬರು, ‘ಹಿಂದಿ ಚಿತ್ರರಂಗ ನಿಮ್ಮಂಥವರು ಇರಲು ತಕ್ಕುದಾಗಿಲ್ಲ. ದಕ್ಷಿಣ ಭಾರತದ ಸಿನಿಮಾಗಳತ್ತ ಬಂದುಬಿಡಿ. ಇಲ್ಲಿ ಒಳ್ಳೊಳ್ಳೆ ನಿರ್ದೇಶಕರು ನಿಮ್ಮ ಸಾಮರ್ಥ್ಯಕ್ಕೆ ತಕ್ಕಂಥ ಸಿನಿಮಾಗಳನ್ನು ಮಾಡುತ್ತಾರೆ’ ಎಂದು ಪ್ರತಿಕ್ರಿಯಿಸಿರುವುದು ವಿಶೇಷ.

ಹೃತಿಕ್ ರೋಷನ್ ಇತ್ತೀಚೆಗೆ ಸಿನಿಮಾಗಳಲ್ಲಿ ಮೊದಲಿನಷ್ಟು ವ್ಯಾಪಕವಾಗಿ ಅಭಿನಯಿಸುತ್ತಿಲ್ಲ. ‘ವಾರ್’ ಹಿಂದಿ ಚಲನಚಿತ್ರ 2019ರಲ್ಲಿ ತೆರೆಕಂಡು, ಯಶಸ್ವಿಯಾಗಿತ್ತು. ಆ ನಂತರ ಕೋವಿಡ್ ಕಾಲಘಟ್ಟದಲ್ಲಿ ಅವರ ಒಂದೂ ಸಿನಿಮಾ ತೆರೆಕಾಣಲಿಲ್ಲ. ಈ ವರ್ಷ ತಮಿಳಿನ ‘ವಿಕ್ರಂ ವೇದಾ’ ರೀಮೇಕ್ ತೆರೆಕಂಡಿತು. ಅವರು ಹಾಗೂ ಸೈಫ್ ಅಲಿ ಖಾನ್ ಅಭಿನಯಿಸಿದ್ದ ಈ ಸಿನಿಮಾ ಕೂಡ ನಿರೀಕ್ಷಿತ ಮಟ್ಟಕ್ಕೆ ಯಶಸ್ಸು ಕಾಣಲಿಲ್ಲ. ಈಗ ‘ಫೈಟರ್’ ಎಂಬ ಸಿನಿಮಾದಲ್ಲಿ ಅವರು ಅಭಿನಯಿಸುತ್ತಿದ್ದಾರೆ.

ತಮ್ಮಿಷ್ಟದ ಸಿನಿಮಾಗಳನ್ನು ಹೃತಿಕ್ ಲಾಗಾಯ್ತಿನಿಂದಲೂ ಮುಕ್ತವಾಗಿ ಹೊಗಳುತ್ತಾ ಬಂದಿದ್ದಾರೆ. ■

# ‘ತಂಗಾಲನ್’ ಒಲ್ಲದ ರಶ್ಮಿಕಾ

ಪಾ. ರಂಜಿತ್ ಸಿನಿಮಾದ ಒಂದು ಮುಖ್ಯಪಾತ್ರದಲ್ಲಿ ಅಭಿನಯಿಸಲು ರಶ್ಮಿಕಾ ಮಂದಣ್ಣ ನಿರಾಕರಿಸಿದ್ದು, ಮಾಳವಿಕಾ ಮೋಹನನ್ ತೆಕ್ಕೆಗೆ ಆ ಪಾತ್ರ ಹೋಗಿದೆ. ಚಿಯಾನ್ ವಿಕ್ರಮ್ ಅಭಿನಯದ ‘ತಂಗಾಲನ್’ ಸಿನಿಮಾದ ಮೊದಲ ಪೋಸ್ಟರ್ ಬಿಡುಗಡೆಯಾಗಿ ವಾರಗಳೇ ಕಳೆದಿವೆ. ಆ ಸಿನಿಮಾದಲ್ಲಿ ಪಾರ್ವತಿ ತಿರುವೊಟ್ಟು ಪ್ರಮುಖ ಪಾತ್ರದಲ್ಲಿ ನಟಿಸುವುದು ನಿಕ್ಕಿಯಾಗಿತ್ತು. ಇನ್ನೊಂದು ಮುಖ್ಯ ಪಾತ್ರಕ್ಕೆ ರಶ್ಮಿಕಾ ಅವರಿಗೆ ಆಹ್ವಾನ ಕೊಡಲಾಗಿತ್ತು. ಅದನ್ನು ರಶ್ಮಿಕಾ ನಿರಾಕರಿಸಿದ್ದಾರೆ. ಒಪ್ಪದೇ ಇರಲು ನಿರ್ದಿಷ್ಟ ಕಾರಣವನ್ನು ಅವರು ತಿಳಿಸಿಲ್ಲ.



ಕೋಲಾರದ ಚಿನ್ನದ ಗಣಿಗಳ ಕಪೋಲಕಲ್ಪಿತ ಕಥೆಯಾಗಿ ‘ಕೆಜಿಎಫ್’ ಎರಡು ಭಾಗಗಳಲ್ಲಿ ತೆರೆಕಂಡು, ಬಾಕ್ಸ್‌ಆಫೀಸ್‌ನಲ್ಲಿ ದೊಡ್ಡ ಯಶಸ್ಸು ಕಂಡ ಉದಾಹರಣೆ ನಮ್ಮ ಎದುರಲ್ಲಿದೆ. ಅದೇ ಸ್ಥಳದ ಸಮುದಾಯವೊಂದರ ಕಥನವನ್ನು ಪಾ. ರಂಜಿತ್ ಹೇಳಲು ಹೊರಟಿದ್ದಾರೆ. ವಿಕ್ರಮ್ ಅದೇ ಸಮುದಾಯದ ಪ್ರಮುಖ ಪಾತ್ರವೊಂದರಲ್ಲಿ ನಟಿಸಲಿದ್ದಾರೆ. ‘ಕುಚೇಲನ್’ ತಮಿಳು ಸಿನಿಮಾದಲ್ಲಿ ಗಮನ ಸೆಳೆದಿದ್ದ ಪಶುಪತಿ ಕೂಡ ಮುಖ್ಯವಾದ ಪಾತ್ರವೊಂದರಲ್ಲಿ ಅಭಿನಯಿಸಲು ಒಪ್ಪಿದ್ದಾರೆ.



ಜಿ.ವಿ. ಪ್ರಕಾಶ್ ಕುಮಾರ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಲಿದ್ದಾರೆ. ಇದೇ ಮೊದಲ ಬಾರಿಗೆ ರಂಜಿತ್ ಅವರೊಟ್ಟಿಗೆ ಈ ಸ್ವರ ಸಂಯೋಜಕ ಕೆಲಸ ಮಾಡುತ್ತಿರುವುದು ವಿಶೇಷ. ‘ನಚ್ಚತ್ತಿರಮ್ ನಗರ್‌ಗಿರದು’ ಸಿನಿಮಾದಲ್ಲಿ ಕಾಡುವಂಥ ದೃಶ್ಯಗಳನ್ನು ಕಟ್ಟಿಕೊಟ್ಟಿದ್ದ ಸಿನಿಮಾಟೊಗ್ರಾಫರ್ ಕಿಶೋರ್ ಕುಮಾರ್ ಈ ಚಿತ್ರಕ್ಕೂ ಕೆಲಸ ಮಾಡಲಿದ್ದಾರೆ. ■